ಕರ್ನಾಟಕ ಸರ್ಕಾರ

<u>ಕಾಲೇಜು ಮತ್ತು ತಾಂತ್ರಿಕ ಶಿಕ್ಷಣ ಇಲಾಖೆ</u>

ಸಂಖ್ಯೆ:ಬಿಟಿಇ/03/ಇಸಿಎಸ್(1)/2020

ನಿರ್ದೇಶಕರವರ ಕಛೇರಿ
ಕಾಲೇಜು ಮತ್ತು ತಾಂತ್ರಿಕ ಶಿಕ್ಷಣ ಇಲಾಖೆ
ಅರಮನೆ ರಸ್ತೆ, ಬೆಂಗಳೂರು 560001
ದಿನಾಂಕ: 26-08-2020

<u>ಸುತ್ತೋಲೆ</u>

ವಿಷಯ: 2020 ರ ಸೆಪ್ಟಂಬರ್ ಡಿಪ್ಲೋಮ ಸೆಮಿಸ್ಟರ್ ಪರೀಕ್ಷಾ ಕಾರ್ಯಗಳ ಸಂಬಂಧ ರಜಾ ಮಂಜೂರಾತಿ ಮಾಡದಿರಲು ಹಾಗೂ ಪರೀಕ್ಷಾ ಕಾರ್ಯಗಳನ್ನು ಕಡ್ಡಾಯವಾಗಿ ನಿರ್ವಹಿಸುವ ಕುರಿತು.

ಉಲ್ಲೇಖ: 1) ಈ ಕಛೇರಿ ಅಧಿಕೃತ ಜ್ಞಾಪನ ಸಂಖ್ಯೆ: ಬಿಟಿಇ/11/ಇಸಿಎಸ್(2)/2019-20 ದಿ:13-07-2020

2) ಸರ್ಕಾರಿ ಆದೇಶ ಸಂಖ್ಯೆ:ಇಡಿ 57 ಟಿಪಿಇ 2013 ದಿನಾಂಕ;17-4-2015

**********

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ 2020 ರ ಸೆಪ್ಟಂಬರ್ ಡಿಪ್ಲೋಮ ಸೆಮಿಸ್ಟರ್ ಥಿಯರಿ ಪರೀಕ್ಷೆಗಳು **ದಿನಾಂಕ: 07-09-2020** ರಿಂದ **28-09-2020** ರ ತನಕ ನಡೆಯುತ್ತವೆ ಹಾಗೂ ತತ್ಸಂಬಂಧ ಕೋಡಿಂಗ್, ಮೌಲ್ಯಮಾಪನ ಕಾರ್ಯಗಳು ಮತ್ತು ಮರುಮೌಲ್ಯಮಾಪನ ಕಾರ್ಯಗಳು ಜರುಗಲಿವೆ. ಪ್ರಯುಕ್ತ ಪರೀಕ್ಷಾ ಪ್ರಾರಂಭದ ದಿನದಿಂದ ಪರೀಕ್ಷೆಗಳು ಮುಗಿಯುವ ದಿನಗಳವರೆಗೂ ಮತ್ತು ಮೌಲ್ಯಮಾಪನ /ಮರುಮೌಲ್ಯಮಾಪನಗಳ ಅವಧಿಗಳಲ್ಲಿ ಪ್ರಾಂಶುಪಾಲರು ಸ್ವತ: ಸಾಂದರ್ಭಿಕ/ಪರಿವರ್ತಿತ/ಗಳಿಕೆ ರಜೆ ಸೇರಿದಂತೆ ಯಾವುದೇ ರಜೆ ಪಡೆಯದಂತೆ ಹಾಗೂ ಬೋಧಕ/ ಬೋಧಕೇತರ ಸಿಬ್ಬಂದಿಯವರಿಗೆ ಸದರಿ ರಜೆಗಳನ್ನು ಮಂಜೂರು ಮಾಡಬಾರದೆಂದು ಸಂಸ್ಥೆಗಳ ಪ್ರಿನ್ಸಿಪಾಲರುಗಳಿಗೆ ಸೂಚಿಸಲಾಗಿದೆ. ತುರ್ತು ಸಂದರ್ಭಗಳಲ್ಲಿ ಮಾತ್ರ ನಿರ್ದೇಶಕರ ಪೂರ್ವಾನುಮತಿ ಪಡೆದು ಕ್ರಮಕೈಗೊಳ್ಳಲು ತಿಳಿಸಲಾಗಿದೆ.

ಪರೀಕ್ಷಾ ಕಾರ್ಯಗಳಿಗೆ ನಿಯೋಜಿಸಲ್ಪಟ್ಟ ಎಲ್ಲಾ ಅಧಿಕಾರಿಗಳು/ಉಪನ್ಯಾಸಕರು/ಸಿಬ್ಬಂದಿಯವರು ಕಡ್ಡಾಯವಾಗಿ ಕರ್ತವ್ಯ ನಿರ್ವಹಿಸತಕ್ಕದ್ದು. ಸದರಿ ಪರೀಕ್ಷಾ ಕಾರ್ಯಗಳ ಬದಲಾವಣೆ/ವಿನಾಯಿತಿ ಇತ್ಯಾದಿಗಳನ್ನು ಕೋರಿ ಕಾರ್ಯದರ್ಶಿಯವರನ್ನು ಖುದ್ದಾಗಿ/ದೂರವಾಣಿ ಮೂಲಕವಾಗಲಿ ಸಂಪರ್ಕಿಸಬಾರದೆಂದು ಈ ಮೂಲಕ ತಿಳಿಯಪಡಿಸಿದೆ. ತುರ್ತು ಸಂದರ್ಭಗಳಲ್ಲಿ ಮಾತ್ರ ಸಂಸ್ಥೆಯ ಪ್ರಾಚಾರ್ಯರಿಂದ ದೃಢೀಕರಿಸಲಾದ ಮನವಿಗಳನ್ನು ಮಾತ್ರ ಮಂಡಳಿಗೆ ಸಲ್ಲಿಸಲು ತಿಳಿಸಲಾಗಿದೆ. ಪ್ರಾಂಶುಪಾಲರುಗಳು ಸದರಿ ಮನವಿಗಳ ನೈಜತೆ ಹಾಗೂ ಅಗತ್ಯತೆಯನ್ನು ಪರಿಶೀಲಿಸಿ, ದೃಢೀಕರಿಸಿದ ನಂತರ ಮಂಡಳಿಗೆ ರವಾನಿಸಲು ತಿಳಿಸಲಾಗಿದೆ. ಯಾವುದೇ ಸಿಬ್ಬಂದಿ ವರ್ಗದವರು ಪರೀಕ್ಷಾ ಕೆಲಸಗಳಿಂದ ವಿನಾಯಿತಿ ಕೋರಿ ನೇರವಾಗಿ ಮಂಡಳಿಯನ್ನು ಸಂಪರ್ಕಿಸಿದ ಪಕ್ಷದಲ್ಲಿ ಅಂತಹವರ ಮೇಲೆ ಶಿಸ್ತು ಕ್ರಮ ಜರುಗಿಸಲಾಗುವುದು ಎಂದು ತಿಳಿಸಲಾಗಿದೆ.

ನಿರ್ದೇಶಕರು
ತಾಂತ್ರಿಕ ಶಿಕ್ಷಣ

ಇವರಿಗೆ,
ರಾಜ್ಯದ ಎಲ್ಲಾ ಪಾಲಿಟೆಕ್ನಿಕ್‌ಗಳ ಪ್ರಾಂಶುಪಾಲರುಗಳಿಗೆ - ಮಾಹಿತಿ ಮತ್ತು ಮುಂದಿನ ಕ್ರಮಕ್ಕಾಗಿ

ಪ್ರತಿ:
1. ಕಂಪ್ಯೂಟರ್ ವಿಭಾಗಕ್ಕೆ - ಬಿಟಿಇ ಲಿಂಕ್ಸ್ ವೆಬ್‌ಪೋರ್ಟಲ್‌ನಲ್ಲಿ ಪ್ರಕಟಿಸಲು
2. ಇ-ಗವರ್ನೆನ್ಸ್ ವಿಭಾಗ –ವೆಬ್‌ಸೈಟ್‌ನಲ್ಲಿ ಪ್ರಕಟಿಸಲು
3. ನಿರ್ದೇಶಕರ ಆಪ್ತ ಶಾಖೆ
4. ಕಾರ್ಯದರ್ಶಿಯವರ ಆಪ್ತಶಾಖೆ
5. ಕಡತಕ್ಕೆ.